ಮಾಧುರ್ಯ, ಇಂಪು ಇರುತ್ತಿದ್ದವು. ನಡುನಡುವೆ ಕೊಳಲಿನ ದನಿ ಬೇರೆ. ಮೈಮರೆತು ಅದನ್ನೆಲ್ಲ ಕೇಳುತ್ತ ಹೊಟ್ಟೆತುಂಬ ಹುಲ್ಲು ಮೇಯುತ್ತಿದ್ದೆವು, ಕೇಳಿದಷ್ಟು ಹಾಲು ಕರೆಯುತ್ತಿದ್ದೆವು. ಆದರೆ ಈ ಹುಲಿಮರಿಯ ಹಾಡಿನಲ್ಲಿ ಅಂಥ ಇಂಪಿಲ್ಲ; ಬದಲಾಗಿ ನೋವಿದೆ, ಯಾತನೆಯಿದೆ!' ಹೀಗೊಂದು ಕ್ಷಣ ಯೋಚಿಸುತ್ತ ನಿಂತಿರುವಾಗಲೇ ಮತ್ತೆ ಹುಲಿಮರಿಯು–

ಪುಣ್ಯಕೋಟಿ ಅಮ್ಮ ನಿನಗೆ
ಕೇಳಬೇಕಿದೆ ಕೆಲವು ಪ್ರಶ್ನೆ,
ಹಾಡು ಬೇಕೋ ಮಾತು ಬೇಕೋ
ಪಾಡು ಮಾತ್ರ ಒಂದೆಯೇ.

– ಹೀಗೆ ಕೇಳಿತು. ಮತ್ತೇನೆನ್ನಿಸಿತೋ ಅದಕ್ಕೆ, ಈ ಗೋಳಿನ ಹಾಡು ಸಾಕೆಂದು ತಕ್ಷಣ ನಿಲ್ಲಿಸಿ, "ಅಮ್ಮಾ ಪುಣ್ಯಕೋಟಿ, ನಿನಗೆ ಹಾಡಿನಲ್ಲಿ ನೋವು ತೋಡಿಕೊಳ್ಳುವಷ್ಟು ತಾಳ್ಮೆ ಈಗ ನನ್ನಲ್ಲಿಲ್ಲ. ಮಾತಲ್ಲೇ ಪ್ರಶ್ನೆ ಕೇಳುವೆ. ನಿನ್ನಿಂದ ನನಗೆ ಕೆಲವು ಖಚಿತ ಉತ್ತರಗಳು ಬೇಕು. ನಿನ್ನೊಡೆಯ ಕಾಳಿಂಗಜ್ಜನಿಗಂತೂ ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಲಾಗಲಿಲ್ಲ. ನೀನಾದರೂ ಉತ್ತರಿಸುವೆಯೆಂಬ ನಂಬಿಕೆ ನನ್ನದು" ಎಂದಿತು.

ಹುಲಿಮರಿಯ ಮಾತು ಪುಣ್ಯಕೋಟಿಯ ಅಂತರಂಗವನ್ನೇ ಚುಚ್ಚಿತು. ಸಂದರ್ಭದ ಹಿನ್ನೆಲೆಯನ್ನರಿಯಲು ಅದಕ್ಕೆ ಹೆಚ್ಚು ಸಮಯ ಬೇಕಾಗಲಿಲ್ಲ. ಕೊಟ್ಟ ಮಾತಿನಂತೆ ತಾನು ದುಷ್ಟವ್ಯಾಘ್ರನಿಗೆ ಬಲಿಯಾಗಬೇಕೆಂದು ಹೋದರೂ, ಅದು ತನ್ನನ್ನು ತಿನ್ನದೆ, ತಾನೇ ಬೆಟ್ಟದಿಂದ ಹಾರಿ ಸತ್ತದ್ದು ಅದರ ನೆನಪಿಗೆ ಬಂತು. 'ಇದರಲ್ಲಿ ತನ್ನ ತಪ್ಪೇನಿದೆ? ಹುಲಿ ಹಾಗೆ ಸತ್ತದ್ದಕ್ಕೆ ನಾನು ಕಾರಣಳೆ?' ಮನಸ್ಸಿನಲ್ಲೇ ತರ್ಕ ಹಾಕಿತು.

"ಹಾಂ, ನಿನ್ನದೇನೂ ತಪ್ಪಿಲ್ಲ ಪುಣ್ಯಕೋಟಿ ಅಮ್ಮಾ"– ಹುಲಿಮರಿ ಮತ್ತೆ ಮಾತಾಡತೊಡಗಿತು. ಪುಣ್ಯಕೋಟಿಗೆ ಇನ್ನೂ ದಿಗಿಲು! ತನ್ನ ಮನಸ್ಸಿನಲ್ಲಿದ್ದುದ್ದು ಕೂಡಾ ಈ ಹುಲಿಮರಿಗೆ ಅರ್ಥವಾಗುತ್ತಿದೆಯಲ್ಲ! ಅಂದರೆ, 'ಇದು ಸಾಮಾನ್ಯದ ಪ್ರಾಣಿಯಲ್ಲ' ಎಂದುಕೊಂಡು, ಅದು ಮುಂದೆ ಹೇಳುವ ಮಾತು ಕೇಳಲು ಅಣಿಯಾಯ್ತು.

"ನನ್ನ ಅಪ್ಪ ಸತ್ತ ಹಿಂದಿನ ದಿನ ಮಾತ್ರ ನಾನು ಹೊಟ್ಟೆಗೆ ತಿಂದದ್ದು. ಅನಂತರ ಐದು ದಿನಗಳ ಪರ್ಯಂತ ಕೂಳಿಗಾಗಿ ಅಲೆದದ್ದು, ಮಾಂಸಕ್ಕಾಗಿ ಹುಡುಕಾಡಿದ್ದು, ಅದು ಸಿಗದಿದ್ದಾಗ ಬೇರೆ ಆಹಾರ ಪದಾರ್ಥಗಳನ್ನು ತಿನ್ನಲು ಪ್ರಯತ್ನಿಸಿದ್ದು, ಇದೆಲ್ಲವೂ ಅಸಾಧ್ಯವೆಂದು ಅರ್ಥಮಾಡಿಕೊಂಡದ್ದು, ಒಂದೇ ಎರಡೇ? ಹೀಗೆ ನನ್ನ ಪ್ರಯತ್ನಗಳೆಲ್ಲ ವಿಫಲವಾದಾಗ, ಕೊನೆಗೆ ನನಗೆದುರಾದ ಕೆಲವು ಪ್ರಶ್ನೆಗಳಿಗೆ ಉತ್ತರ ಪಡೆಯಲೆಂದೇ ಇಲ್ಲಿಗೆ ಬಂದಿರುವೆ. ನಿನ್ನನ್ನು ಸಾಕಿದ ಮನುಷ್ಯನಂತೂ ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ನೀನು ಈ ದೇಶದ ಮೂವತ್ಮೂರು ಕೋಟಿ ದೇವತೆಗಳನ್ನು ಪ್ರತಿನಿಧಿಸುವ ಏಕೈಕ ದೇವತೆ ಎಂದೇ ಹೇಳುತ್ತಾರೆ. ಅಂತೆಯೇ ನನ್ನೀ ಪ್ರಶ್ನೆಗಳಿಗೆ ನೀನು ಉತ್ತರಗಳನ್ನು ಕೊಟ್ಟೇ ಕೊಡುತ್ತೀಯೆಂಬ ಪೂರ್ಣ ನಂಬಿಕೆ ನನಗಿದೆ. ಆ ಮಾತಿರಲಿ. ನನ್ನ ಪ್ರಶ್ನೆಗಳನ್ನು ನಾನು ನಂತರ ಕೇಳುವೆ. ನೀನು ಉತ್ತರ ಕೊಡುವ ಮೊದಲು ನನ್ನ ಹಸಿವು ದೂರವಾಗಬೇಕು. ಏಕೆಂದರೆ ನಾನು ಮೊದಲು ಬದುಕಬೇಕು. ಅಕಾರಣವಾಗಿ ಸಾಯುವುದು ನನಗೆ ಇಷ್ಟವಿಲ್ಲ. ನನ್ನ ಅಪ್ಪನ ಹಾಗೆ ನಾನು ಮೂರ್ಖನಾಗಲಾರೆ. ಅದಕ್ಕೆಂದೇ ನಿನ್ನೊಂದಿಗೆ ನಾನು ಮಾತಾಡಬೇಕು. ಹಾಗೆ ಮಾತಾಡಲು ಒಂದಿಷ್ಟಾದರೂ ಶಕ್ತಿ ಬೇಕಲ್ಲ, ಅದಕ್ಕಾಗಿ ಮೊದಲು ನನ್ನ ಹೊಟ್ಟೆಗೆ ಏನಾದರೂ